ಧಾರವಾಡ ವಿದ್ಯಾವರ್ಧಕ ಸಂಘಕ್ಕೆ ಅನುದಾನ ಮಂಜೂರಾತಿ

೧೭೭ ಶ್ರೀ ಬಾಬುರೆಡ್ಡಿ ಎಂ. ತಂಗಳ್ (ಬೀಳಗಿ).—ವಾರ್ತಾ ಮತ್ತು ಯುವಜನ ಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯೆನಿಸಿರುವ ಧಾರವಾಡದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಂದ ಹಿರಿಯಂದೆನಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘವಿರುವುದು ಸರ್ಕಾರಕ್ಕೆ ತಿಳಿದಿದೆಯೆ ?

(ಆ) ೧೯೭೫ ರಿಂದ ೧೯೮೫ರವರೆಗೆ ಈ ಸಂಸ್ಥೆಗೆ ಯಾವ ಯಾವ ಬಾಬಿನಲ್ಲಿ ಅನುದಾನ ನೀಡಿದ ಹಣ ಎಷ್ಟು (ವರ್ಷವಾರು ಮಾಹಿತಿಯನ್ನು ಒದಗಿಸುವುದು).

(ಇ) ಸಂಘವು ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸರ್ಕಾರದವರು ಉದಾರ ರೀತಿಯಿಂದ ಸಹಾಯ ಮಾಡುವ ವಿಚಾರವೇನಾದರೂ ಇದೆಯೇ ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಸಚಿವರು).—

(ಅ) ತಿಳಿದಿದೆ

(ಆ) ಪಟ್ಟಿ ಲಗತ್ತಿಸಿದೆ

(ಇ) ಸಂಘವು ಹಮ್ಮಿಕೊಳ್ಳುವ ಕಾರ್ಯ ಕ್ರಮವಗಳನ್ನು ಪರಿಶೀಲಿಸಿ ಧನ ಸಹಾಯ ನೀಡಲಾಗುವುದು.

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡಕ್ಕೆ ಅನುದಾನ ನೀಡಿದ ವಿವರ.—

೧೯೭೮-೭೯		
ಜಿ. ಓ. ನಂ. ಇಡಿ ೧೪೭ ಎಸ್‌ಟಿಬಿ ೭೮, ೪-೧೨-೭೮	...	ರೂ. ೨೫,೦೦೦.೦೦
೧೯೭೯-೮೦		
ಜಿ. ಓ. ನಂ. ಇಡಿ ೧೧೯ ಎಸ್‌ಟಿಬಿ ೭೯, ೩೧-೮-೮೦	...	ರೂ. ೨೫,೦೦೦.೦೦
೧೯೮೦-೮೧		
ಜಿ. ಓ. ನಂ. ಇಡಿ ೪೮ ಎಸ್‌ಟಿಬಿ ೮೦, ೩೦-೩-೮೧	...	ರೂ. ೫೦,೦೦೦.೦೦
೧೯೮೧-೮೨		
ಜಿ. ಓ. ನಂ. ಐಟಿವೈ ೧೧೩ ಕೆಆರ್‌ಎ ೮೪, ೨೨-೯-೮೪	...	ರೂ. ೨೭,೫೨೯.೫೦
೧೯೮೨-೮೩		
ಜಿ. ಓ. ನಂ. ಐಟಿವೈ ೬೪ ಕೆಎಫ್‌ವಿ ೮೨, ೩೧-೩-೮೩	...	ರೂ. ೫೦,೦೦೦.೦೦
೧೯೮೩-೮೪		
ಜಿ. ಓ. ನಂ. ಐಟಿವೈ ೧೯ ಕೆಎಫ್‌ವಿ ೮೪, ೨೭-೩-೮೪	...	ರೂ. ೪೦,೦೦೦.೦೦
ಜಿ. ಓ. ನಂ. ಐಟಿವೈ ೪೪ ಕೆಎಫ್‌ವಿ ೮೪, ೨೪-೭-೮೪	...	ರೂ. ೧೦,೦೦೦.೦೦

೧೯೮೪-೮೫

ಜಿ.ಓ. ನಂ. ಐಟಿವೈ ೩೫ ಕೆಎಫ್‌ವಿ ೮೪, ೧೨-೭-೮೪ ರೂ. ೧,೦೦,೦೦೦.೦೦ (ಕಟ್ಟಡಕ್ಕಾಗಿ)
ಜಿ.ಓ. ನಂ. ಐಟಿವೈ ೧೮ ಕೆಆರ್‌ಎ ೮೪, ೮-೧೧-೮೪ ರೂ. ೨,೦೦,೦೦೦.೦೦ (ಪ್ರಕಟಣೆಗಾಗಿ)
ಜಿ.ಓ. ನಂ. ಐಟಿವೈ ೩೭ ಕೆಎಫ್‌ವಿ ೮೫, ೩೦-೩-೮೫ ರೂ. ೧,೦೦,೦೦೦.೦೦ (ಕಟ್ಟಡಕ್ಕಾಗಿ)
ಜಿ.ಓ. ನಂ. ಐಟಿವೈ ೮೭ ಕೆಎಫ್‌ವಿ ೮೪, ೩೦-೩-೮೫ ರೂ. ೫೦,೦೦೦.೦೦ (ವಾರ್ಷಿಕ ಅನುದಾನ)

೧೯೮೫-೮೬

ಜಿ.ಓ. ನಂ. ಐಟಿವೈ ೯ ಕೆಎಫ್‌ವಿ ೮೫, ೧೨-೯-೮೫ ರೂ. ೧,೫೦,೦೦೦.೦೦ (ಕಟ್ಟಡಕ್ಕಾಗಿ)

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟದ ಸಾಂಸ್ಕೃತಿಕ ರಾಜಧಾನಿಯೆನಿಸಿರುವ ಧಾರವಾಡದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹಿರಿಯರೆನಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಯಾವುದೇ ನಿರ್ದಿಷ್ಟವಾದ ಧನಸಹಾಯವನ್ನು ಮಾಡುತ್ತಾ ಇಲ್ಲ. ಆ ದೃಷ್ಟಿಯಿಂದ ನಿಜವಾಗಿಯೂ ಅಲ್ಲಿ ಯಾವ ಸಂಸ್ಕೃತಿಯ ಕಾರ್ಯಕ್ರಮಗಳು ನಡೆಯುತ್ತಾ ಇಲ್ಲ. ಇಂತಹ ದೊಡ್ಡ ದೊಡ್ಡ ಸಂಘ ಸಂಸ್ಥೆಗಳಿಗೆ ಎಷ್ಟು ಧನಸಹಾಯ ಕೊಡುತ್ತೀರಿ ಎಂದು ತಿಳಿಸಬೇಕಾಗಿದೆ.

ಡಾ. ಜೀವರಾಜ್ ಆಳ್ವ.—ಸ್ವಾಮಿ, ಈ ಕರ್ನಾಟಕ ವಿದ್ಯಾವರ್ಧಕ ಸಂಘದ ಜಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅದೂ ಬಹಳ ಹಳೆಯ ಸಂಘ. ಇದು ಸುಮಾರು ೭೯-೮೫ ವರ್ಷದಿಂದಲೂ ಇದೆ. ನಮ್ಮ ಸರ್ಕಾರ ಬರುವದಕ್ಕೆ ಮೊದಲು ಹಿಂದಿನ ಸರ್ಕಾರ ಇಂಥ ಸಂಘಗಳಿಗೆ ಬರೇ ಒಂದು ಲಕ್ಷ ರೂಪಾಯಿಗಳ ಒದಗಿಸಿದ್ದರು. ನಮ್ಮ ಸರ್ಕಾರ ಬಂದ ಮೇಲೆ ಕಳೆದ ೩ ವರ್ಷದಿಂದ ಇದಕ್ಕೆ ೫ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಿದ್ದೇವೆ.

ಲೋಕಾಯುಕ್ತರ ನೇಮಕಾತಿ ಬಗ್ಗೆ.

೭೬ (೧೯೦). ಶ್ರೀ ವಂಲ್ಲಾರಿಗೌಡ ಎಸ್. ಪಾಟೀಲ್ (ಹಂಕೇಶ್ವರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಲೋಕಾಯುಕ್ತರನ್ನು ನೇಮಕಾತಿ ಮಾಡುವುದರಲ್ಲಿ ತಡವಾದುದಕ್ಕೆ ಕಾರಣಗಳೇನು ?

ಆ) ನೇಮಕಾತಿಗೊಂಡಿರುವ ಲೋಕಾಯುಕ್ತರಿಗೆ ಬರತಕ್ಕಂಥ ಭಾಷೆಗಳಾವುವು ಹಾಗೂ ಕನ್ನಡದ ಸ್ಥಾನವನ್ನು ಸಂಪೂರ್ಣವಾಗಿ ಅರಿತಿರುವರೆ ?

ಇ) ಲೋಕಾಯುಕ್ತರಿಗೆ ಬೇಕಾಗುವ ಒಟ್ಟಾರೆ ಸಿಬ್ಬಂದಿ ವರ್ಗ ಹಾಗೂ ಅವರ ಶಿಕ್ಷಣ ಅರ್ಹತೆ ಯೇನು ?

ಈ) ಲೋಕಾಯುಕ್ತರ ಕಛೇರಿಗೆ ಬರತಕ್ಕಂಥ ಒಟ್ಟಾರೆ ವಾರ್ಷಿಕ ವೆಚ್ಚವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯಮಂತ್ರಿಗಳು).—

ಅ) ಲೋಕಾಯುಕ್ತರನ್ನು ಈಗಾಗಲೇ ನೇಮಕ ಮಾಡಿದೆ ಮತ್ತು ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಲೋಕಾಯುಕ್ತರ ಹಿಂದಿ, ಉರ್ದು. ಪಂಜಾಬಿ ಮತ್ತು ಆಂಗ್ಲ ಭಾಷೆಗಳನ್ನು ತಿಳಿದಿರುತ್ತಾರೆ, ಅವರು ಕನ್ನಡ ಭಾಷಾ ಜ್ಞಾನವನ್ನು ಅರಿತಿಲ್ಲ.

ಇ) ಲೋಕಾಯುಕ್ತರಿಗೆ ೯ ಜನ ಆಪ್ತ ಸಿಬ್ಬಂದಿ ವರ್ಗದವರನ್ನು ಒದಗಿಸಲಾಗಿದೆ. ಮತ್ತು ಲೋಕಾಯುಕ್ತರ ಅರ್ಹತೆಯು ಅಧಿನಿಯಮವಾದ ಕಲಂ ೩ ರಲ್ಲಿ ಕಾಣಿಸಿದಂತೆ.

ಈ) ಆಪ್ತಸಿಬ್ಬಂದಿ ವರ್ಗದವರಿಗೆ ತಗಲುವ ವಾರ್ಷಿಕ ವೆಚ್ಚ ೯೭,೩೭೨ ರೂಪಾಯಿಗಳು.